**ಸಾಗರ ತಾಲ್ಲೂಕಿನ ಜೋಗ್‌ನಲ್ಲಿ ಸರ್ಕಾರಿ ಅತಿಥಿ ಗೃಹ ನಿರ್ಮಾಣ**

81(264) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

1) ಸಾಗರ ತಾಲ್ಲೂಕಿನ ಜೋಗ್‌ದಲ್ಲಿ ಅತಿಥಿಗೃಹದ ನಿರ್ಮಾಣ ಯಾವಾಗ ಪ್ರಾರಂಭಿಸಲಾಯಿತು ಮತ್ತು ಈವರೆಗೆ ಪೂರ್ಣಗೊಳಿಸದೇ ಇರಲು ಕಾರಣಗಳೇನು?

ಶ್ರೀ ಸಿ. ಎಂ. ಉದಾಸಿ : (ಲೋಕೋಪಯೋಗಿ ಮಂತ್ರಿಗಳು)

ಕಾಮಗಾರಿಯನ್ನು 192-93 ರಲ್ಲಿ ಪ್ರಾರಂಭಿಸಿ, 1994 ರವರೆಗೆ ಭಾಗಶ: ನಿರ್ವಹಿಸಿ ರೂ. 83.00 ಲಕ್ಷ ವೆಚ್ಚ ಮಾಡಲಾಗಿದೆ. ಡಿಸೆಂಬರ್ 94 ರ ಸರ್ಕಾರದ ಆದೇಶದ ರೀತ್ಯಾ ಇಲಾಖೆ ವತಿಯಿಂದ ತೆಗೆದುಕೊಂಡ ಕೆಲಸವನ್ನು ಸ್ಥಗಿತಗೊಳಿಸಿ, ನಂತರ ಉಳಿಕೆ ಕೆಲಸವನ್ನು ಪೂರ್ಣಗೊಳಿಸಲು ಜನವರಿ 96ರಲ್ಲಿ ಉಳಿದ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಯಿತು. ಈ ಶೀರ್ಷಿಕೆಯಡಿಯಲ್ಲಿ ಅನುಧಾನದ ಕೊರತೆಯಿಂದಾಗಿ ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಳಂಬವಾಗಿದೆ. ಈ ಕೆಲಸವನ್ನು ವಾಸ್ತವಿಕೆಗನುಸಾರವಾಗಿ ಪೂರ್ಣಗೊಳಿಸಲು ಒಟ್ಟು ರೂ. 60.00 ಲಕ್ಷಗಳು ಬೇಕಾಗಿದ್ದು ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿದೆ. ಇದುವರೆವಿಗೂ 43.96 ಲಕ್ಷ ವಿಚ್ರ್ಾಗಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದರಿ ಅತಿಥಿ ಗೃಹ ನಿರ್ಮಾಣಕ್ಕೆ 43 ಲಕ್ಷ ರೂಪಾಯಿಗಳು ವಿಚ್ರ್ಾಗಿದ್ದು ಐದು ವರ್ಷ ಕಳೆದು ಹೋಗಿದ್ದು, ಅತಿಥಿಗೃಹ ನಿರ್ಮಾಣಕ್ಕೆ ಮಾಡಿರುವ ವಿಚ್ರ್ಾನ ಹಣಕ್ಕೆ ಬೆಲೆ ಇಲ್ಲದಂತಾಗಿದೆ. ಆದಕ್ಕೋಸ್ಕರ ಭಾಗಶ: ನಿರ್ಮಾಣವಾಗಿರುವ ಅತಿಥಿ ಗೃಹವನ್ನು ಪೂರ್ಣಗೊಳಿಸಲು ಹನ್ನೆರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಒಂದು ವರ್ಷದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತದಾದ್ದರಿಂದ 1998-99 ನೇ ಸಾಲಿನಲ್ಲಿ ಬೇಕಾದಂಥ ಹಣವನ್ನು ಕೊಟ್ಟು ಕೆಲಸವನ್ನು ಪೂರ್ಣಗೊಳಿಸಲು ಪ್ರಯತ್ನಿಸಬೇಕು.

ಶ್ರೀ ಸಿ.ಎಂ. ಉದಾಸಿ :- ಮಾನ್ಯ ಅಧ್ಯಕ್ಷರೆ, ಸದರಿ ಅತಿಥಿ ಗೃಹವನ್ನು ಪೂರ್ಣಗೊಳಿಸಿ ಇನ್ನೂ ಹದಿನಾರು ಲಕ್ಷ ರೂಪಾಯಿಗಳ ಅವಶ್ಯಕತೆಯಿರುವುದರಿಂದ, ಇದರ ಮಂಜೂರಾತಿಗಾಗಿ ಅನುಮತಿ ಪಡೆಯಲು ಈಗಾಗಲೇ ಪ್ರಯತ್ನಿಸಿದ್ದು, ಇನ್ನು ಆರು ತಿಂಗಳೊಳಗೆ ಈ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನಿಸುತ್ತೇನೆ.

**(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು**

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ 23.3.1998 ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 6ನೇ ಪ್ರಶ್ನೆಗಳ ಪಟ್ಟಿಯ ಒಟ್ಟು 104 ಪ್ರಶ್ನೆಗಳ ಪೈಕಿ 53 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದಿಡುತ್ತೇನೆ.